ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 03-12-1978.

# *ಪಾಪ ಮತ್ತು ಪುಣ್ಯದ ಗುಹ್ಯಗತಿ*

(पाप और पुण्य की गुह्य गति)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ  ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ಬಾಪ್‌ದಾದಾ ಸರ್ವ ಮಕ್ಕಳಿಗೂ ವಿಶೇಷ ಅಭ್ಯಾಸದ ಸ್ಮೃತಿಯನ್ನು ನೀಡುತ್ತಿದ್ದಾರೆ. ಒಂದು ಸೆಕೆಂಡ್‌ನಲ್ಲಿ ಈ ಧ್ವನಿಯ ಪ್ರಪಂಚದಿಂದ ದೂರವಾಗಿ ಶಬ್ದದಿಂದ ಅತೀತವಾದ ಲೋಕದ ನಿವಾಸಿ ಆಗಬಲ್ಲಿರಾ? ಎಷ್ಟು ಶಬ್ದ ಅಥವಾ ಮಾತಿನಲ್ಲಿ ಬರುವ ಅಭ್ಯಾಸ ಇದೆಯೋ, ಕೇಳುವ ಅಭ್ಯಾಸ ಇದೆಯೋ, ಶಬ್ದವನ್ನು ಧಾರಣೆ ಮಾಡುವ ಅಭ್ಯಾಸ ಇದೆಯೋ ಅಷ್ಟೇ ಮಾತಿನಿಂದ ಅತೀತವಾದ ಸ್ಥಿತಿಯಲ್ಲಿ ಸ್ಥಿತರಾಗಿ ಸರ್ವಪ್ರಾಪ್ತಿಗಳನ್ನು ಮಾಡಿಕೊಳ್ಳುವ ಅಭ್ಯಾಸ ಇದೆಯೇ. ಹೇಗೆ ಮಾತಿನ ಮೂಲಕ ರಮಣೀಯತೆಯ ಅನುಭವವನ್ನು ಮಾಡುತ್ತೀರೋ, ಸುಖದ ಅನುಭವವನ್ನು ಮಾಡುತ್ತೀರೋ ಹಾಗೆಯೇ ಮಾತಿನಿಂದ ಅತೀತವಾದ ಅವಿನಾಶಿ ಸುಖಸ್ವರೂಪದ ರಮಣೀಯತೆಯ ಅವಸ್ಥೆಯ ಅನುಭವವನ್ನು ಮಾಡುತ್ತೀರೋ, ಶಾಂತಿಯ ಜೊತೆ ಜೊತೆಗೆ ಅತಿ ಶಾಂತಿ ಹಾಗೂ ಅತಿ ರಮಣೀಯತೆಯ ಸ್ಥಿತಿಯ ಅನುಭವ ಇದೆಯೇ? ಸ್ಮೃತಿಯ ಸ್ವಿಚ್ ಹಾಕಿದ ಕೂಡಲೇ ಅಂತಹ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಇಂತಹ ಆತ್ಮಿಕ ಲಿಫ್ಟ್ ನ ಕೊಡುಗೆಯು (ಗಿಫ್ಟ್) ಪ್ರಾಪ್ತಿಯಾಗಿದೆಯೇ. ಸದಾಸಿದ್ಧರು (ಎವರ್ ರೆಡಿ) ಆಗಿದ್ದೀರಾ? ಒಂದು ಸೆಕೆಂಡ್‌ನ ಸಂಕೇತದಿಂದ ಏಕರಸ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. ಇಂತಹ ಆತ್ಮಿಕ ಸೈನ್ಯವು ತಯಾರಾಗಿದೆಯೇ? ಅಥವಾ ಸ್ಥಿತರಾಗುವುದರಲ್ಲಿಯೇ ಸಮಯವು ಕಳೆದುಹೋಗುವುದೋ? *ಈಗ ಎಂತಹ ಸಮಯವು ಬರಲಿದೆ ಎಂದರೆ ಇಂತಹ ಸತ್ಯ ಅಭ್ಯಾಸದ ಮುಂದೆ ಅನೇಕರ ಯಥಾರ್ಥವಲ್ಲದ ಅಭ್ಯಾಸವು ತಾನಾಗಿಯೇ ಪ್ರತ್ಯಕ್ಷ ಆಗಿಬಿಡುವುದು. ಈ ಅಭ್ಯಾಸವು ತಾನಾಗಿಯೇ ಪ್ರತ್ಯಕ್ಷ ಆಗಿಬಿಡುವುದು.* ಈ ಅಭ್ಯಾಸವು ಯಥಾರ್ಥವಾದುದಲ್ಲ ಎಂದು ಹೇಳುವ ಅಗತ್ಯ ಇರುವುದಿಲ್ಲ. ಆದರೆ ಯಥಾರ್ಥ ಅಭ್ಯಾಸದ ವಾಯುಮಂಡಲದ ಕಂಪನ (ವೈಬ್ರೇಷನ್)ಗಳ ಮೂಲಕ ತಾನಾಗಿಯೇ ಸಿದ್ಧ ಆಗಿಬಿಡುವುದು. ಅಂತಹ ಸಂಘಟನೆಯು ತಯಾರಾಗಿದೆಯೇ, ಈಗ ಸಮಯದ ಅನುಸಾರವಾಗಿ ಅನೇಕ ಪ್ರಕಾರದ ಜನರು ನಿಮ್ಮನ್ನು ಪರೀಕ್ಷಿಸಲು(ಶೋಧನೆ) ಬರುವರು. ನಾವು ಬ್ರಾಹ್ಮಣರಾಗಿರುವೆವು. ಒಬ್ಬರ ನೆನಪಿನಲ್ಲಿ ಏಕರಸ ಸ್ಥಿತಿಯಲ್ಲಿ ಸ್ಥಿತರಾಗುವವರಾಗಿದ್ದೇವೆ ಎಂದು ಸಂಘಟಿತ ರೂಪದಲ್ಲಿ ಯಾವ ಸವಾಲು ಹಾಕುತ್ತೀರೋ ಅಂತಹ

ಬ್ರಾಹ್ಮಣ ಸಂಘಟನೆಯ ಪರೀಕ್ಷೆಯು ನಡೆಯುವುದು. ವೈಯುಕ್ತಿಕವಾಗಿ ಸ್ಥಿತರಾಗುವುದೇನೂ ದೊಡ್ಡ ಮಾತಲ್ಲ ಆದರೆ ನೀವೆಲ್ಲರೂ ವಿಶ್ವದ ಕಲ್ಯಾಣಕಾರಿಗಳೂ ವಿಶ್ವಪರಿವರ್ತಕರೂ ಆಗಿದ್ದೀರಿ. ವಿಶ್ವ ಪರಿವರ್ತಕ ಸಂಘಟನೆಯು ವಿಶ್ವಕ್ಕೆ ತನ್ನ ವೃತ್ತಿಯ ಕಂಪನಗಳ ಮೂಲಕ ಅಥವಾ ತನ್ನ ಸ್ಮೃತಿಸ್ವರೂಪ ಸಾಮರ್ಥ್ಯದ ಮೂಲಕ ಹೇಗೆ ಸೇವೆಯನ್ನು ಮಾಡುತ್ತದೆ ಎನ್ನುವುದನ್ನು ಪರೀಕ್ಷೆ ಮಾಡಲು ಅನೇಕರು ಬರುವರು. ಇಂದಿನ ವಿಜ್ಞಾನದ ಮೂಲಕ ಶಾಂತಿಯ ಶಕ್ತಿಯ ಹೆಸರು ಪ್ರಸಿದ್ಧಿ ಆಗುವುದು. ಯೋಗದ ಮೂಲಕ ಶಕ್ತಿಗಳು ಯಾವುವು ಹಾಗೂ ಎಲ್ಲಿಯವರೆಗೆ ಪ್ರಸಾರ ಆಗುತ್ತವೆ. ಅವುಗಳ ವಿಧಿ ಮತ್ತು ಗತಿಯು ಏನಾಗಿರುತ್ತದೆ ಎನ್ನುವುದೆಲ್ಲವೂ ಪ್ರತ್ಯಕ್ಷದಲ್ಲಿ ಕಂಡುಬರುವುದು, ಅಂತಹ ಸಂಘಟನೆಯು ತಯಾರಾಗಿದೆಯೇ. ಸಮಯದ ಅನುಗುಣವಾಗಿ ಈಗ ವ್ಯರ್ಥವಾದುದೆಲ್ಲವನ್ನೂ ತೊರೆದು ಸಮರ್ಥ ಸ್ವರೂಪರಾಗಿರಿ. ಹೀಗೆ ವಿಶ್ವ ಸೇವಾಧಾರಿ ಆಗಿರಿ. ಇಷ್ಟು ದೊಡ್ಡ ಕಾರ್ಯಕ್ಕೆ ನಿಮಿತ್ತ ಆಗಿರುವ ನೀವು ಅದನ್ನು ಸ್ಮೃತಿಯಲ್ಲಿ ಇಟ್ಟುಕೊಳ್ಳಿರಿ. ಇಷ್ಟು ಶ್ರೇಷ್ಠ ಕಾರ್ಯದ ಮುಂದೆ ಸ್ವಯಂನ ಪುರುಷಾರ್ಥದಲ್ಲಿ ಏರುಪೇರು ಅಥವಾ ಸ್ವಯಂನ ದೌರ್ಬಲ್ಯಗಳು ಅನುಭವ ಆಗುತ್ತವೆಯೇ? ಇಷ್ಟು ವಿಶಾಲ ಕಾರ್ಯದ ಮುಂದೆ ನಿಮ್ಮ ಯಾವ ದೌರ್ಬಲ್ಯಗಳನ್ನು ಅನುಭವ ಮಾಡುತ್ತೀರಿ? ಒಳಿತೆನಿಸುತ್ತದೆಯೇ? ಅಥವಾ ಸ್ವಯಂ ನಿಮಗೇ ನಾಚಿಕೆ ಆಗುತ್ತದೆಯೋ ? ನೀವು ತೊಟ್ಟಿರುವ ಪಣ ಹಾಗೂ ಪ್ರತ್ಯಕ್ಷ ಜೀವನ ಸಮಾನ ಆಗಬೇಕು. ಇಲ್ಲದಿದ್ದರೆ ಪಣ ತೊಟ್ಟಿರುವುದಕ್ಕೂ ಹಾಗೂ ನಿತ್ಯ ಜೀವನಕ್ಕೂ ಮಹಾನ್ ಅಂತರ ಇರುವುದರಿಂದ ಸೇವಾಧಾರಿ ಎನ್ನುವುದಕ್ಕೆ ಬದಲಾಗಿ, ಯಾವ ಬಿರುದು ಕೊಡುವುದು? ಹೀಗೆ ಮಾಡುವ ಆತ್ಮರು ಅನೇಕ ಆತ್ಮರನ್ನು ವಂಚಿತರನ್ನಾಗಿ ಮಾಡಲು ನಿಮಿತ್ತ ಆಗಿಬಿಡುತ್ತಾರೆ. ಪುಣ್ಯಾತ್ಮರಾಗುವುದಕ್ಕೆ ಬದಲಾಗಿ ಹೊರೆಯನ್ನು ಹೊತ್ತುಕೊಂಡಿರುವ ಆತ್ಮರಾಗಿಬಿಡುತ್ತಾರೆ. ಸಂಕಲ್ಪದ ಪಾಪಕ್ಕೂ ಸಹ ಪ್ರತ್ಯಕ್ಷ ಫಲವು ಪ್ರಾಪ್ತಿಯಾಗುತ್ತದೆ. ಸಂಕಲ್ಪದಲ್ಲಿ ಯಾವುದಾದರೂ ವಿಕಾರ ಬರುವುದು, ಸ್ವಯಂ ನಿಮ್ಮ ದೌರ್ಬಲ್ಯವು ಪಾಪದ ಖಾತೆಯಲ್ಲಿ ಸಂಗ್ರಹವಾಗುತ್ತದೆ, ಆದರೆ ಅನ್ಯ ಆತ್ಮರ ಬಗ್ಗೆ ಸಂಕಲ್ಪದಲ್ಲಾದರೂ ಯಾವುದೇ ವಿಕಾರಕ್ಕೆ ವಶವಾದ ವೃತ್ತಿ ಇದ್ದರೆ ಅದೂ ಸಹ ಮಹಾಪಾಪ ಆಗುತ್ತದೆ. ಯಾರಾದರೂ ಅನ್ಯ ಆತ್ಮರ ಬಗ್ಗೆ ವ್ಯರ್ಥ ಮಾತೂ ಸಹ ಪಾಪದ ಖಾತೆಯಲ್ಲಿ ಸೇರುತ್ತವೆ. ಹಾಗೆಯೇ ಕರ್ಮ ಎಂದರೆ ಸಂಬಂಧ ಹಾಗೂ ಸಂಪರ್ಕದ ಮೂಲಕ ಯಾರ ಬಗ್ಗೆಯಾದರೂ ಶುಭ ಭಾವನೆಗೆ ಬದಲಾಗಿ ಬೇರೆ ಯಾವುದಾದರೂ ಭಾವನೆ ಇದ್ದರೆ ಅದೂ ಸಹ ಪಾಪದ ಲೆಕ್ಕದಲ್ಲಿ ಸೇರುತ್ತದೆ. ಏಕೆಂದರೆ ಇದೂ ಸಹ ದುಃಖವನ್ನು ಕೊಟ್ಟಂತಾಗುತ್ತದೆ. ಶುಭ ಭಾವನೆ ಪುಣ್ಯದ ಖಾತೆಯನ್ನು ವೃದ್ಧಿಮಾಡುತ್ತದೆ. ವ್ಯರ್ಥಭಾವನೆಯಾಗಲಿ, ತಿರಸ್ಕಾರದ ಭಾವನೆಯಾಗಲಿ ಅಥವಾ ಅಸೂಯೆಯ ಭಾವನೆ ಆಗಲಿ ಪಾಪದ ಖಾತೆಯನ್ನು ಹೆಚ್ಚಿಸುತ್ತದೆ. ಆದ್ದರಿಂದ ನೀವು ತಂದೆಯ ಮಕ್ಕಳು ಆದಿರಿ, ಆಸ್ತಿಗೆ(ವಾರಸತ್ವಕ್ಕೆ) ಅಧಿಕಾರಿ ಆದೆವು ಎಂದರೆ ಪುಣ್ಯಾತ್ಮರಾದೆವು ಎನ್ನುವ ನಿಶ್ಚಯ ಹಾಗೂ ನಶೆಯಂತು ತುಂಬಾ ಒಳ್ಳೆಯದು. ಆದರೆ ನಶೆ ಹಾಗೂ ಅಸೂಯೆಯನ್ನು ಬೆರಕೆ ಮಾಡಬಾರದು. ತಂದೆಯ ಮಕ್ಕಳಾದ ನಂತರ ಆಗುವ ಪ್ರಾಪ್ತಿಗೆ ಎಣಿಕೆಯೇ ಇಲ್ಲ. ಆದರೆ ಪುಣ್ಯಾತ್ಮರಾಗುವುದರ ಜೊತೆಗೆ ಪಾಪದ ಭಾರವೂ 100% ಇರುತ್ತದೆ. *ತಂದೆಯನ್ನು ಅರಿತುಕೊಂಡಿದ್ದೀರಿ ಹಾಗೂ ವಾರಸತ್ವವನ್ನು ಅರಿತುಕೊಂಡಿದ್ದೀರಿ. ಅಷ್ಟು ಮಾತ್ರಕ್ಕೆ ಈಗ ಎಲ್ಲವೂ ಪುಣ್ಯವೇ ದೊರೆಯುತ್ತದೆ, ಪಾಪವು ಕೊನೆ ಆಗಿಬಿಟ್ಟಿತು ಅಥವಾ ಸಂಪೂರ್ಣ ಆಗಿಬಿಟ್ಟಿದ್ದೇನೆ ಎಂದು ತಿಳಿಯಬೇಡಿರಿ. ಬ್ರಹ್ಮಾಕುಮಾರ, ಕುಮಾರಿಯ ಜೀವನದ ನಿಯಮಗಳನ್ನೂ ಸಹ ಗಮನದಲ್ಲಿ ಇಟ್ಟುಕೊಳ್ಳಿರಿ. ಮರ್ಯಾದೆಗಳನ್ನೂ ಸಹ ಎದುರಿನಲ್ಲಿ ಇಟ್ಟುಕೊಳ್ಳಿರಿ. ಪುಣ್ಯಾತ್ಮರೆಂದು ಹೇಳಿಕೊಳ್ಳುತ್ತಾ ಮನ, ವಚನ, ಕರ್ಮದ ಮೂಲಕ ನಾನು ಯಾವುದಾದರೂ ಪಾಪವನ್ನು ಮಾಡಿದನೇ ಎಂದು ಪರಿಶೀಲಿಸಿಕೊಳ್ಳಿರಿ.* ಯಾವ ಖಾತೆಯು ವೃದ್ಧಿ ಆಯಿತು. ನಾನು ಯಾವುದೇ ಪ್ರಕಾರದ ನಡವಳಿಕೆಯ ಮೂಲಕ ತಂದೆ ಅಥವಾ ಜ್ಞಾನದ ಹೆಸರಿಗೆ ಕಳಂಕ ತರಲಿಲ್ಲವೇ ಎಂದು ನೋಡಿಕೊಳ್ಳಿರಿ. ತಂದೆಯ ಬಳಿಯಂತೂ ಪ್ರತಿಯೊಬ್ಬರ ಖಾತೆಯು ಸ್ಪಷ್ಟವಾಗಿದೆ. ಆದರೆ ಸ್ವಯಂ ನಿಮ್ಮ ಮುಂದೆಯೂ ಸ್ಪಷ್ಟ ಮಾಡಿಕೊಳ್ಳಿರಿ. ನಾನು ಇದೆಲ್ಲವನ್ನೂ ಸರಿಯಾಗಿಯೇ ಮಾಡುತ್ತೇನೆ ಎಂದು ಮೋಸ ಮಾಡಬೇಡಿರಿ. ಇದಂತು ಆಗಿಯೇ ಆಗುತ್ತದೆ. ಇದಂತೂ ಎಲ್ಲರಲ್ಲಿಯೂ ಇದೆ ಎಂದು ವಾದ ಮಾಡಬೇಡಿರಿ. ಎಲ್ಲರಲ್ಲಿಯೂ ಇರಬಹುದು, ಆದರೆ ನಾನು ಇದರಿಂದ ಸುರಕ್ಷಿತನಾಗಿದ್ದೇನೆ ಎನ್ನುವ ಶುಭ ಇಚ್ಛೆ ಇಟ್ಟುಕೊಳ್ಳಿರಿ, ಆಗ ವಿಶ್ವ ಸೇವಾಧಾರಿ ಆಗಬಹುದು. ಸಂಘಟಿತ ರೂಪದಲ್ಲಿ ಏಕಮತ, ಏಕರಸ ಸ್ಥಿತಿಯ ಅನುಭವವನ್ನು ಮಾಡಿಸಬಹುದು. ಇಲ್ಲಿಯವರೆಗೂ ಪಾಪದ ಖಾತೆಯು ಇದ್ದರೆ

ಆತ್ಮರನ್ನು ಪುಣ್ಯಾತ್ಮರನ್ನಾಗಿ ಮಾಡಲು ನಿಮಿತ್ತರು ಹೇಗಾಗುವಿರಿ? ಆದ್ದರಿಂದ ಹುಡುಗಾಟಿಕೆಯಲ್ಲಾದರೂ ಪಾಪದ ಖಾತೆಯನ್ನು ವೃದ್ಧಿಮಾಡಿಕೊಳ್ಳುವುದನ್ನು ನಿಲ್ಲಿಸಿರಿ. ಸದಾ ಪುಣ್ಯಾತ್ಮಭವದ ವರದಾನವನ್ನು ತೆಗೆದುಕೊಳ್ಳಿರಿ. ಅಜ್ಞಾನಿಗಳು ಯಾವ ಆದರ್ಶವಾಕ್ಯವನ್ನು ಹೊಂದಿರುತ್ತಾರೆ? ಕೆಟ್ಟದ್ದನ್ನು ಕೇಳಬೇಡಿ. ಕೆಟ್ಟದ್ದನ್ನು ನೋಡಬೇಡಿ, ಹಾಗೂ ಕೆಟ್ಟದ್ದನ್ನು ಆಲೋಚನೆ ಮಾಡಬೇಡಿರಿ ಎಂದು. ತಂದೆ ತಿಳಿಸುತ್ತಿದ್ದಾರೆ ವ್ಯರ್ಥವನ್ನು ಕೇಳಬೇಡಿ ಮತ್ತು ಯಾರಿಗೂ ಕೇಳಿಸಲೂಬೇಡಿರಿ ಮತ್ತು ಯೋಚಿಸಬೆಡಿರಿ ಸದಾ ಶುಭ ಭಾವನೆಯಿಂದ ಆಲೋಚನೆ ಮಾಡಿರಿ, ಶುಭ ವಾದುದನ್ನೇ ನುಡಿಯಿರಿ. ವ್ಯರ್ಥವಾದುದನ್ನೂ ಸಹ ಶುಭಭಾವನೆಯಿಂದ ಕೇಳಿರಿ. ಹೇಗೆ ವಿಜ್ಞಾನದ ಉಪಕರಣವು ಕೆಟ್ಟ ವಸ್ತುವನ್ನೂ ಸಹ ಒಳ್ಳೆಯದನ್ನಾಗಿ ಮಾಡಿಬಿಡುತ್ತದೆ. ರೂಪವನ್ನು ಪರಿವರ್ತನೆ ಮಾಡಿ ಬಿಡುತ್ತದೆ. ಹಾಗೆಯೇ ನೀವು ಸದಾ ಶುಭ ಚಿಂತಕರು ಸರ್ವಾತ್ಮರ ಮಾತಿನ ಭಾವವನ್ನು ಪರಿವರ್ತನೆ ಮಾಡಲಾರಿರಾ? *ಸದಾ ಭಾವ ಹಾಗೂ ಭಾವನೆಯನ್ನು ಶ್ರೇಷ್ಠವಾಗಿಟ್ಟುಕೊಂಡರೆ ಸದಾ ಪುಣ್ಯಾತ್ಮರಾಗಿಬಿಡುವಿರಿ,* ಸ್ವಯಂ ನಿಮ್ಮ ಪರಿವರ್ತನೆ ಮಾಡಿ ನೋಡಿಕೊಳ್ಳಿರಿ. ಹಾಗೆ ಮಾಡದೆ ಅನ್ಯ ಆತ್ಮರ ಪರಿವರ್ತನೆಯ ಬಗ್ಗೆ ಆಲೋಚನೆ ಮಾಡಬೇಡಿರಿ. ಸ್ವಯಂ ನಿಮ್ಮ ಪರಿವರ್ತನೆಯೇ ಅನ್ಯ ಆತ್ಮರ ಪರಿವರ್ತನೆಯಾಗಿದೆ. ಇದರಲ್ಲಿ ಮೊದಲು ನಾನು ಆಗಬೇಕು ಎಂದು ಯೋಚಿಸಿರಿ. ಹೀಗೆ ಮರುಜೀವ ಆಗುವುದರಲ್ಲಿಯೇ ಆನಂದ ಇದೆ. ಇದನ್ನೇ ಮಹಾಬಲಿ ಎಂದು ಕರೆಯಲಾಗುತ್ತದೆ. ಗಾಬರಿ ಆಗಬೇಡಿರಿ. ಆನಂದದಿಂದ ಸಾಯಿರಿ. ಹೀಗೆ ಸಾಯುವುದು ಜೀವಿಸಿರುವುದೇ ಆಗಿದೆ. ಇದೇ ಸತ್ಯವಾದ ಜೀವದಾನ ಆಗಿದೆ. ನಿಮ್ಮ ಮೊದಲ ವಚನವು ಯಾವುದಾಗಿದೆ? “ಒಬ್ಬ ತಂದೆಯ ಹೊರತು ಬೇರೆಯಾರೂ ಇಲ್ಲ” ಎಂದರೆ ಸಾಯುವುದು, ಹೆಸರೇನೋ ಸಾಯುವುದು ಎಂದು ಇದೆ, ಆದರೆ ಎಲ್ಲವನ್ನೂ ಪಡೆಯಬೇಕಾಗಿದೆ. ಇದನ್ನು ಪಾಲನೆ ಮಾಡುವುದು ಕಷ್ಟ ಎನಿಸುತ್ತದೆಯೇ, ಇದು ಸಹಜವಾಗಿದೆ ಆದರೆ ಪರಿವರ್ತನೆ ಮಾಡಿಕೊಳ್ಳುವುದು ಬರುವುದಿಲ್ಲ ಅಷ್ಟೇ. ಭಾವ, ಭಾವನೆಯ ಪರಿವರ್ತನೆ ಮಾಡಿಕೊಳ್ಳುವುದು ನಿಮಗೆ ಬರುವುದಿಲ್ಲ. ಭಲೇ ನಾಟಕ ಎಂದು ಹೇಳುವಾಗ ಭಲೇ ಎಂದು ಹೇಳುವುದರಲ್ಲಿಯೂ ಇದೆಲ್ಲವೂ ಏನಾಗಿಬಿಡುತ್ತದೆ. ಪ್ರತಿಯೊಂದು ಪ್ರಸಂಗವೂ ಪ್ರಶಂಸಾರ್ಥ ಆಗಿಬಿಡುತ್ತದೆ ಅಲ್ಲವೇ. ಅಯ್ಯೋ ಅಯ್ಯೋ ಎನ್ನುವುದು ಕೊನೆಯಾಗಿ ಸೊಗಸಾಗಿದೆ. ಚೆನ್ನಾಗಿದೆ ಎನ್ನುವುದು ಬಂದುಬಿಡುತ್ತದೆ. ಎಂತಹ ತಂದೆ, ಎಂತಹ ನಾಟಕ ಹಾಗೂ ನನ್ನ ಪಾತ್ರವು ಎಷ್ಟು ಚೆನ್ನಾಗಿದೆ ಎನ್ನುವ ಸ್ಮೃತಿಯಲ್ಲಿಯೇ ಇದ್ದರೆ ವಿಶ್ವವು ನಿಮ್ಮನ್ನು ಪ್ರಶಂಸೆ ಮಾಡುವುದು. ಕಷ್ಟ ಎಂದು ಯಾವಾಗ ಅನಿಸುತ್ತದೆ ಎಂದರೆ ನೀವು ತಂದೆಯ ಜೊತೆಯನ್ನು ಮರೆತುಬಿಟ್ಟಾಗ. ತಂದೆಯನ್ನು ಜೊತೆಗಾರರನ್ನಾಗಿ ಮಾಡಿಕೊಂಡು ಕಷ್ಟವಾದುದನ್ನು ಸುಲಭ ಮಾಡಿಕೊಳ್ಳಿರಿ. ಒಳ್ಳೆಯದು.

**ಸದಾ ಸಹಜಯೋಗಿ, ಸ್ವಯಂ ನಿಮ್ಮ ಪರಿವರ್ತನೆಯ ಮೂಲಕ ವಿಶ್ವದ ಪರಿವರ್ತನೆ ಮಾಡುವವರು, ಪ್ರತಿಯೊಂದು ಸಂಕಲ್ಪ ಹಾಗೂ ಪ್ರತಿಯೊಂದು ಸೆಕೆಂಡ್‌ನಲ್ಲಿ ಪುಣ್ಯದ ಖಾತೆಯನ್ನು ಕೂಡಿ ಹಾಕಿ ಕೊಳ್ಳುವವರು, ನಿಮ್ಮ ಸಾಮರ್ಥ್ಯದ ಮೂಲಕ ವಿಶ್ವವನ್ನು ಸಮರ್ಥ ಮಾಡುವವರು ಇಂತಹ ಮಹಾನ್ ಸದಾ ಶ್ರೇಷ್ಠ ಪುಣ್ಯಾತ್ಮರಿಗೆ ಬಾಪ್ ದಾದಾರವರ, ನೆನಪು, ಪ್ರೀತಿ ಹಾಗೂ ನಮಸ್ತೆ.**

**ತಂಡಗಳ ಜೊತೆಯಲ್ಲಿ**:

(1) ಸದಾ ತಂದೆಯ ಮೂಲಕ ದೊರೆತಿರುವ ಮಹಾಮಂತ್ರವು ನೆನಪಿರುತ್ತದೆಯೇ, ಮಂತ್ರವು ಎಷ್ಟು ಸಹಜವಾದುದಾಗಿದೆ. ಇದೇ ಮಂತ್ರದಿಂದ ನೀವು ಸರ್ವ ದುಃಖಗಳಿಂದ ಪಾರಾಗಿ ಸುಖದ ಸಾಗರ ತಂದೆಯ ಸಮಾನ ಆಗಿಬಿಡುತ್ತೀರಿ. ಯಾವುದೇ ಪ್ರಕಾರದ ದುಃಖಗಳಿಂದ ಪಾರಾಗಿ ಸುಖದ ಸಾಗರ ತಂದೆಯ ಸಮಾನ ಆಗಿಬಿಡುತ್ತೀರಿ. ಯಾವುದೇ ಪ್ರಕಾರದ ದುಃಖವು ಬಂದರೆ ಮಂತ್ರವನ್ನು ಉಪಯೋಗಿಸಿಕೊಂಡರೆ ದುಃಖವು ತೊಲಗಿ ಹೋಗುವುದು. ಈಗ ದುಃಖದ ಅಲೆಯೂ ಸಹ ಬರಲು ಸಾಧ್ಯವಿಲ್ಲ. ಸ್ವಪ್ನದಲ್ಲಿಯೂ ಸ್ವಲ್ಪವೂ ದುಃಖದ ಅನುಭವ ಆಗಬಾರದು, ಏನೇ ಸಂಭವಿಸಲಿ ಶರೀರವು ರೋಗಿಯಾಗಲಿ, ಹಣದ ಬಗ್ಗೆ ಲಾಭನಷ್ಟ ಆಗಲಿ ಏನೇ

ಆದರೂ ದುಃಖದ ಅಲೆಯು ಅಂತರ್ಯದಲ್ಲಿ ಪ್ರವೇಶಿಸಬಾರದು. ಅಲೆಯು ಬಂದುಹೋಗಿಬಿಡಬೇಕು. ಸಾಗರದಲ್ಲಿ ಎಂದಾದರೂ ಸ್ನಾನ ಮಾಡಿದ್ದೀರಾ? ಅಲೆಯು ಬಂದರೆ ಹಾರಿ ಪಾರಾಗಿಬಿಡುತ್ತಾರೆ. ಒಂದು ವೇಳೆ ಸಮುದ್ರದಲ್ಲಿ ಸ್ನಾನಮಾಡುವ ವಿಧಾನವು ಗೊತ್ತಿದ್ದರೆ ಸಮುದ್ರ ಸ್ನಾನದ ಸುಖವನ್ನು ಅನುಭವಿಸುತ್ತಾರೆ. ಇಲ್ಲದಿದ್ದರೆ ಮುಳುಗಿಹೋಗಿಬಿಡುತ್ತಾರೆ. ಆದ್ದರಿಂದ ಅಲೆಗಳಲ್ಲಿ ತೇಲಾಡುವುದು ಬರುತ್ತದೆಯೋ ಅಥವಾ ಮುಳುಗಿಬಿಡುತ್ತೀರೋ? ಸಾಗರನ ಮಕ್ಕಳು ಮುಳುಗುವುದಂತೂ ಸಾಧ್ಯವಿಲ್ಲ. ಆಟವಾಡುತ್ತಿದ್ದೀರೋ ಎನ್ನುವಂತೆ ಅಲೆಗಳನ್ನು ದಾಟಿಬಿಡಿ, ದುಃಖದ ದಿನಗಳು ಸಮಾಪ್ತಿಯಾಗಿ ಬಿಟ್ಟವು.

(2) **ವಿಜಯೀಭವದ ವರದಾನದಿಂದ ಮಾಯೆಯನ್ನು ಬೀಳ್ಕೊಡಿ:** ಬಾಪ್‌ದಾದಾರವರ ಮೂಲಕ ಸದಾ ವಿಜಯೀಭವದ ವರದಾನವು ಪ್ರಾಪ್ತಿಯಾಗಿದೆಯೋ? ಯಾವಾಗ ಅಲೌಕಿಕ ಜನ್ಮವನ್ನು ತೆಗೆದುಕೊಂಡಿದ್ದೀರೋ ಆಗ ಆ ಜನ್ಮದ ಬಳುವಳಿಯಾಗಿ ಅಥವಾ ವರದಾನವಾಗಿ ತಂದೆಯು ವಿಜಯೀಭವದ ವರದಾನವನ್ನು ಕೊಟ್ಟಿದ್ದಾರೆ. ಈ ವರದಾನವು ನೆನಪಿರುವಾಗ ಮಾಯೆಯು ನಿಮ್ಮಿಂದ ಬೀಳ್ಕೊಡುತ್ತದೆ. ಮಾಯೆಯು ಮೂರ್ಚಿತ ಆಗಿಬಿಡುತ್ತದೆ. ನಿಮ್ಮನ್ನು ಎದುರಿಸಲು ಅದಕ್ಕೆ ಸಾಧ್ಯ ಆಗುವುದಿಲ್ಲ. ಸಿಂಹದ ಮುಂದೆ ಆಡು(ಕುರಿ) ಏನು ಮಾಡುವುದು ನೋಡುತ್ತಲೇ ಮೂರ್ಚೆ ಹೋಗಿಬಿಡುವುದಲ್ಲವೇ. ಹಾಗೆಯೇ ಈ ವರದಾನವು ಸ್ಮೃತಿಯಲ್ಲಿ ಬರುವಾಗ ಮಾಯೆಯು ನಿಮ್ಮನ್ನು ಎದುರಿಸಲಾರದು. ಮಾಯೆಯ ರಾಜ್ಯವು ಈಗ ಸಮಾಪ್ತಿ ಆಗಲಿದೆ. ಹೇಗೆ ಯಾರನ್ನಾದರೂ ಬಲವಂತದಿಂದ ಹೋರಾಟಕ್ಕೆ ಮುಂದೆ ದೂಡುತ್ತಾರೋ ಹಾಗೆಯೇ ಸ್ವಲ್ಪ ಉಸಿರು ಉಳಿದಿದ್ದರೂ ಮಾಯೆಯು ತನ್ನ ಹಠವನ್ನು ತೋರಿಸುತ್ತಾ ಇದೆ. ಮಾಯೆಯು ಶಕ್ತಿಹೀನ ಆಗಿದೆ. ಶಕ್ತಿಶಾಲಿ ಆಗಿಲ್ಲ. ಅಲ್ಲದೆ ನೀವೆಲ್ಲರೂ ಮಾಸ್ಟರ್ ಸರ್ವಶಕ್ತಿವಂತರಾಗಿದ್ದೀರಿ. ಇಂತಹ ಮಾಸ್ಟರ್ ಸರ್ವಶಕ್ತಿವಂತರ ಮುಂದೆ ಶಕ್ತಿಹೀನ ಮಾಯೆಯು ಏನುತಾನೇ ಮಾಡಬಲ್ಲದು? ಹೇಗೆ ಕಲ್ಪದ ಹಿಂದೆಯೂ ಇವರೆಲ್ಲರೂ ಸತ್ತುಹೋಗಿದ್ದಾರೆ ಎಂದು ಹೇಳಲಾಯಿತಲ್ಲವೇ. ಹಾಗೆಯೇ ಈ ಮಾಯೆಯು ಸಹ ಸತ್ತುಹೋಗಿದೆ, ಜೀವಿಸಿಲ್ಲ. ನೀವು ಕೇವಲ ನಿಮಿತ್ತ - ಮಾತ್ರವಾಗಿ ಜಯಶಾಲಿಗಳಾಗಬೇಕು. ಒಳ್ಳೆಯದು.

(3) **ವಿಜಯಶಾಲೀತನದ ನಶೆಯಿಂದ ಸರ್ವ ಆಕರ್ಷಣೆಗಳಿಂದ ದೂರ ಆಗಿಬಿಡುವುದು:** ಸದಾ ನಿಮ್ಮನ್ನು ಅತ್ಮಿಕ ಶಸ್ತ್ರಧಾರಿ ಶಕ್ತಿಸೈನ್ಯ ಅಥವಾ ಪಾಂಡವಸೈನ್ಯ ಎಂದು ತಿಳಿದಿರುತ್ತೀರಾ? ಸೈನ್ಯಕ್ಕೆ ಅಥವಾ ಯೋಧರಿಗೆ ಸದಾ ಏನು ನೆನಪಿರುತ್ತದೆ? ವಿಜಯ ಅಲ್ಲವೇ. ಆದ್ದರಿಂದ ಸದಾ ವಿಜಯದ ಬಾವುಟವು ನಿಮ್ಮ ಮಸ್ತಕದಮೇಲೆ ಹಾರುತ್ತಿರುವಂತೆ ಅನುಭವ ಮಾಡುತ್ತೀರೋ? ಸದಾ ವಿಜಯದ ಪತಾಕೆಯನ್ನು ಹಾರಿಸುವ ವಿಜಯಶಾಲಿ ರತ್ನ ಆಗಿದ್ದೀರಲ್ಲವೇ. ಅಂತಹ ವಿಜಯಶಾಲಿ ರತ್ನಗಳ ಜ್ಞಾಪಕಾರ್ಥವಾಗಿ ತಂದೆಯ ಕೊರಳಿನ ಹಾರವು ಇಂದಿನವರೆಗೂ ಪೂಜಿಸಲ್ಪಡುತ್ತಿದೆ. ಪ್ರತಿಯೊಬ್ಬರಿಗೂ ಈ ನಶೆ ಇರಲೇಬೇಕು. ನಾನು ಕೊರಳಿನ ಹಾರ ಆಗಿದ್ದೇನೆ ಎನ್ನುವ ನಶೆ ಇರಲಿ. ವಿಜಯದ ಕುರುಹಾಗಿ ಸದಾ ಹರ್ಷಿತರಾಗಿ ಇರುವಿರಿ, ಯಾವುದೇ ಪ್ರಕಾರದ ಆಕರ್ಷಣೆಯಿಂದ ದೂರ ಆಗುವಿರಿ, ಏನೇ ಸಂಭವಿಸಲಿ ತಂದೆಯಂತಹ ಆಕರ್ಷಣಾಸ್ವರೂಪ ಯಾರಾದರೂ ಇದ್ದಾರೇನು? ಎಲ್ಲರಿಗಿಂತಲೂ ಸುಂದರ ಆದವರು ಯಾರು? ತಂದೆ ಶಿವನೇ ಅಲ್ಲವೇ. ಆದ್ದರಿಂದ ಸದಾ ತಂದೆಯ ನೆನಪಿರಲಿ, ಅದೇ ಆಕರ್ಷಣೆಯಲ್ಲಿ ಆಕರ್ಷಿತರಾಗಿರಿ. ಆಗ ಬೇರೆಯಾವ ಆಕರ್ಷಣೆಯೂ ನಿಮ್ಮನ್ನು ಆಕರ್ಷಿಸಲಾರದು. ಒಂದು ವೇಳೆ ಯಾರಾದರೂ ನಿಮಗೆ ತಮ್ಮ ರಾಜ್ಯಭಾಗ್ಯವನ್ನು ಕೊಡಲು ಬಂದರೆ ತೆಗೆದುಕೊಳ್ಳುವಿರಾ? (ಇಲ್ಲ) ಅದೇಕೆ? ಏಕೆಂದರೆ ಈಗಿನ ಕಾಲದ ರಾಷ್ಟ್ರಾಧ್ಯಕ್ಷರ ಪೀಠವು ಮುಳ್ಳುಗಳ ಆಸನ ಆಗಿದೆ. ಕಿರೀಟ ಸಿಂಹಾಸನವನ್ನು ಬಿಟ್ಟು ಮುಳ್ಳುಗಳ ಕುರ್ಚಿಯನ್ನು ಯಾರು ಆರಿಸಿಕೊಳ್ಳುವರು? ಇಂದು ಇರುವ ಸ್ಥಾನವು ನಾಳೆ ಇರುವುದಿಲ್ಲ. ಆದ್ದರಿಂದ ನಮಗೇನು ದೊರೆತಿದೆಯೋ ಅದು ಬೇರೆಯಾರಿಗೂ ದೊರೆಯಲಾರದು ಎನ್ನುವ ನಶೆಯಲ್ಲಿ ಸದಾ ಇರಿ. ಈ ರಾಜ್ಯಾಧ್ಯಕ್ಷರು ಸ್ವರ್ಗದಲ್ಲಿ ಬರಲು ಬಯಸಿದರೆ ಬರುವರೇನು? ಎಲ್ಲಿಯವರೆಗೆ ತಂದೆಯ ಮಗು ಆಗುವುದಿಲ್ಲವೋ ಅಲ್ಲಿಯವರೆಗೆ ಸ್ವರ್ಗದಲ್ಲಿ ಬರಲು

ಸಾಧ್ಯವಿಲ್ಲ. ಅವರು ಮೃತ್ಯುಲೋಕದಲ್ಲಿಯೇ ಉಳಿದು ಬಿಡುವರು. ನಾವು ಸ್ವರ್ಗದಲ್ಲಿ ಹೋಗುವೆವು ಎನ್ನುವ ಆ ನಶೆ, ಖುಷಿ ಇರಲಿ, ನಾವು ವಿಶ್ವದ `ಮಾಲಿಕನ ಮಕ್ಕಳಾಗಿದ್ದೇವೆ ಎನ್ನುವ ನಶೆ ಇರಲಿ, ಸದಾ ಭಾಗ್ಯದ ಸೌಮಾಂಗಲ್ಯವು ಪ್ರಾಪ್ತಿ ಆಗಿದೆ ಆದ್ದರಿಂದ ಸದಾ ಸುಮಂಗಲಿ ಆಗಿಬಿಟ್ಟಿದ್ದೀರಲ್ಲವೇ.

(4) **ನಡೆದಾಡುತ್ತಾ, ತಿರುಗಾಡುತ್ತಾ ಚೈತನ್ಯ ಆಕರ್ಷಣೆ ಮಾಡುವ ಬೋರ್ಡ್- ಖುಷಿಯ ಚೆಹರೆಯಾಗಿದೆ.** ಯಾರು ಭಾಗ್ಯಶಾಲಿ ಆಗಿರುತ್ತಾರೋ ಅವರು ಸದಾ ಖುಷಿಯಿಂದ ಇರುತ್ತಾರೆ. ಯಾರೇ ನೋಡಿದರೂ ಖುಷಿಯ ಖಜಾನೆಯನ್ನು ನೋಡುತ್ತಾ ಖಜಾನೆಯ ಕಡೆಗೆ ಆಕರ್ಷಿತರಾಗಿಬಿಡಬೇಕು. ಯಾವುದಾದರೂ ಅಮೂಲ್ಯ ವಸ್ತುವನ್ನು ಎಲ್ಲಿಯಾದರೂ ಇಟ್ಟಿದ್ದರೆ ಇಚ್ಛೆ ಇಲ್ಲದಿದ್ದರೂ ಸಹ ಅದರ ಕಡೆಗೆ ಎಲ್ಲರೂ ಆಕರ್ಷಿತರಾಗುತ್ತಾರೆ. ಹಾಗೆಯೇ ಯಾರ ಬಳಿ ಖುಷಿಯ ಖಜಾನೆಯು ಇದೆಯೋ ಅವರ ಕಡೆಗೇ ತಾನಾಗಿಯೇ ಸರ್ವರೂ ಆಕರ್ಷಿತರಾಗುವರು. ಹಸನ್ಮುಖವು(ಖುಷಿಯ ಚಹರೆ) ನಡೆದಾಡುತ್ತಾ, ತಿರುಗಾಡುತ್ತಾ ಆಕರ್ಷಣೆಯನ್ನು ಮಾಡುವ ಚೈತನ್ಯ ಬೋರ್ಡ್ ಆಗಿದೆ. ಎಲ್ಲಿಗೆ ಹೋದರೂ ಅದು ತಂದೆಯ ಪರಿಚಯವನ್ನು ಕೊಡುವುದು. ಹಸನ್ಮುಖವನ್ನು ನೋಡಿದರೆ ಹಸನ್ಮುಖರನ್ನಾಗಿ ಮಾಡುವವರ ನೆನಪು ಅವಶ್ಯವಾಗಿ ಬರುವುದು. ಆದ್ದರಿಂದ ನೀವೆಲ್ಲರೂ ಅಂತಹ ಚೈತನ್ಯ ಬೋರ್ಡ್ ಆಗಿದ್ದೀರಲ್ಲವೇ. ಒಂದು ಬೋರ್ಡ್ ಇಷ್ಟೊಂದು ಆತ್ಮರಿಗೆ ಪರಿಚಯವನ್ನು ಕೊಡಬಹುದಾದರೆ. ನೀವು ಇಷ್ಟೊಂದು ಚೈತನ್ಯ ಬೋರ್ಡ್ ಗಳು ಎಷ್ಟು ಮಂದಿಗೆ ಪರಿಚಯವನ್ನು ಕೊಡಬಹುದು. ಇಷ್ಟೊಂದು ಆಕರ್ಷಣೆ ಮಾಡುವ ಬೋರ್ಡ್‌ಗಳು ತಯಾರಾಗಿಬಿಟ್ಟರೆ ನಿಮಗೆ ಸ್ಥಳವನ್ನು ಇನ್ನೂ ವಿಸ್ತರಿಸಬೇಕಾಗುವುದು. ಸ್ವಲ್ಪ ವಿನಾಶದ ನಗಾರಿಯು ಭಾರಿಸಲಿ ಆಗ ಭಿಕಾರಿಗಳಾಗಿ ಎಲ್ಲರೂ ನಿಮ್ಮ ಬಳಿ ಬರುವರು, ನೀವು ಸಂಪನ್ನರಾಗಿರಬೇಕು, ಅದಕ್ಕಾಗಿ ಅವರಿನ್ನೂ ತಡೆದಿದ್ದಾರೆ.

(5) **ಬಾಪ್ ದಾದಾರವರ ಸರ್ವಶ್ರೇಷ್ಠ ಶೃಂಗಾರವು ಸಂತುಷ್ಟಮಣಿ**: ಯಾರು ಸಂತುಷ್ಟಮಣಿಗಳಾಗಿದ್ದಾರೋ ಅವರೇ ತಂದೆಯ ಸರ್ವಶ್ರೇಷ್ಠ ಶೃಂಗಾರ ಆಗಿದ್ದಾರೆ. ಯಾರು ಸದಾ ಸಂತುಷ್ಟರಾಗಿರುತ್ತಾರೋ ಅವರನ್ನು ಸಂತುಷ್ಟಮಣಿ ಎಂದು ಕರೆಯಲಾಗುತ್ತದೆ. ಸದಾ ಸಂತುಷ್ಟತೆಯ ಪ್ರಭೆಯು ಮಸ್ತಕದಿಂದ ಪ್ರಕಾಶಿಸುತ್ತಿರಲಿ, ಅಂತಹವರೇ ಸಾಕ್ಷಾತ್ಕಾರಮೂರ್ತಿಯಾಗಲು ಸಾಧ್ಯವಾಗುತ್ತದೆ. ಬಾಪ್ ದಾದಾ ಪ್ರತಿಯೊಬ್ಬ ರತ್ನವನ್ನೂ ನಮ್ಮ ಶೃಂಗಾರ ಎಂದು ತಿಳಿದುಕೊಳ್ಳುತ್ತೇವೆ. ನಿಮ್ಮನ್ನು ಅಂತಹ ಶ್ರೇಷ್ಠ ಶೃಂಗಾರವೆಂದು ತಿಳಿದುಕೊಂಡು ಸದಾ ಸೌಭಾಗ್ಯಶಾಲಿಗಳಾಗಿರುತ್ತೀರಾ? ಇಂತಹ ಅದೃಷ್ಟ ಅಥವಾ ಭಾಗ್ಯವು ಇಡೀ ಕಲ್ಪದಲ್ಲಿ ಯಾರಿಗೂ ದೊರೆಯಲು ಸಾಧ್ಯವಿಲ್ಲ. ಅದೃಷ್ಟವಂತರು ಸದಾ ಖುಷಿಯಲ್ಲಿ ನರ್ತಿಸುತ್ತಾ ಇರುವರು. ಬಾಪ್‌ದಾದಾರವರಿಗೆ ಎಷ್ಟು ಖುಷಿ ಆಗುತ್ತಿದೆಯೋ ಅದಕ್ಕಿಂತಲೂ ಹೆಚ್ಚು ಖುಷಿ ಮಕ್ಕಳಿಗೆ ಇರಬೇಕು. ಅಲೆದಾಡುತ್ತಿರುವವರಿಗೆ ನೆಲೆ ಅಥವಾ ಆಶ್ರಯವು ಸಿಕ್ಕಿಬಿಟ್ಟರೆ ಅಥವಾ ಬಾಯಾರಿರುವವರಿಗೆ ಬಾಯಾರಿಕೆಯು ತಣಿದುಹೋದರೆ ಅವರು ಖುಷಿಯಲ್ಲಿ ನರ್ತಿಸುವರಲ್ಲವೇ. ಎಂತಹ ಆನಂದದಲ್ಲಿ ಇರಬೇಕೆಂದರೆ ಯಾರಾದರೂ ವ್ಯಾಕುಲ ಆತ್ಮರು ನಿಮ್ಮನ್ನು ನೋಡಿದಾಗ ಅವರೂ ಸಹ ಖುಷಿಯಾಗಬೇಕು. ಅವರ ಜಿಗುಪ್ಸೆಯು ಅಳಿದು ಹೋಗಬೇಕು.

(6) **ವಿಶೇಷ ಆತ್ಮರ ವಿಶೇಷ ಕರ್ತವ್ಯವು ತಮ್ಮ ಪ್ರತಿಯೊಂದು ಕರ್ಮದಮೇಲೆ ಗಮನ ಇಡುವುದು**: ನಾನು ಯಾವ ಕರ್ಮವನ್ನು ಮಾಡುವನೋ, ನನ್ನನ್ನು ನೋಡಿ ಎಲ್ಲರೂ ಅದನ್ನೇ ಮಾಡುವರು ಎನ್ನುವ ಗಮನವನ್ನು ಪ್ರತಿಯೊಂದು ಕರ್ಮದ ಬಗ್ಗೆ ಇಟ್ಟುಕೊಳ್ಳುವುದೇ ವಿಶೇಷ ಆತ್ಮರ ಕರ್ತವ್ಯ ಆಗಿದೆ. ನಿಮ್ಮ ಪ್ರತಿಯೊಂದು ಕರ್ಮವು ಎಂತಹದಾಗಬೇಕೆಂದರೆ ಅದನ್ನು ನೋಡಿ ಎಲ್ಲರೂ ಇನ್ನೊಮ್ಮೆ ಮಾಡಿರಿ(oncemore) ಎಂದು ಹೇಳಬೇಕು. ಹೇಗೆ ಲೌಕಿಕ ನಾಟಕದಲ್ಲಿ ಯಾರು ವಿಶೇಷ

ಪಾತ್ರಧಾರಿಗಳಾಗಿರುತ್ತಾರೋ ಅವರನ್ನು ನಾಯಕ ಪಾತ್ರಧಾರಿಗಳೆಂದು ಕರೆಯುತ್ತಾರೆ. ಅವರಿಗೆ ತಮ್ಮ ಮೇಲೆ ಎಷ್ಟು ಗಮನ ಇರುತ್ತದೆ. ಪ್ರತಿಯೊಂದು ಹೆಜ್ಜೆಯನ್ನೂ ಆಲೋಚನೆಮಾಡಿ ಅರಿತುಕೊಂಡು ಇಡುವರು, ಏಕೆಂದರೆ ಎಲ್ಲರ ದೃಷ್ಟಿಯು ನಾಯಕ ಪಾತ್ರಧಾರಿಯ ಮೇಲೆಯೇ ಇರುತ್ತದೆ. ಆದ್ದರಿಂದ ಇಷ್ಟು ಗಮನ ಇಟ್ಟುಕೊಂಡು ನಡೆಯಿರಿ, ಪುರುಷಾರ್ಥದ ಪ್ರತಿಯೊಂದು ವಿಷಯದಲ್ಲಿ ವರ್ಧಿಸುವ ಕಲೆಯ ಅನುಭವವನ್ನು ಮಾಡುವ ಆತ್ಮರು ತಾವಾಗಿಯೇ ಸರ್ವರ ಸೇವಾಧಾರಿ ಆಗಿಬಿಡುತ್ತಾರೆ. ವರ್ಧಿಸುವಕಲೆ ಉಳ್ಳವರು ಸದಾ ಸ್ವಯಂ ತಮ್ಮೊಂದಿಗೆ ಸಂತುಷ್ಟರಾಗಿರುವ ಕಾರಣದಿಂದ ಸರ್ವರಿಗೂ ಸಂತುಷ್ಟತೆಯ ಮಹಾದಾನವನ್ನು ಕೊಡಲು ನಿಮಿತ್ತ ಆಗುತ್ತಾರೆ. ನಿಮ್ಮದು ಅಂತಹ ವರ್ಧಿಸುವ ಕಲೆ ಆಗಿದೆಯೋ, ಒಳ್ಳೆಯದು.

ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 03-12-1978.

***ಪಾಪ ಮತ್ತು ಪುಣ್ಯದ ಗುಹ್ಯಗತಿ***

ನೀವು ಮಾತಿಗೆ ಅತೀತವಾಗುವುದರಿಂದ ಶಾಂತಿಯೊಂದಿಗೆ, ರಮಣೀಯತೆ, ಅವಿನಾಶೀ ಸುಖವನ್ನು ಅನುಭವ ಮಾಡಿಕೊಳ್ಳಬಲ್ಲಿರಿ. ಒಂದು ಕ್ಷಣದ ಸಂಕೇತದಿಂದ ಏಕರಸ ಸ್ಥಿತಿಯಲ್ಲಿ ಸ್ಥಿತರಾಗಬೇಕು. ಇಂತಹ ಆತ್ಮಿಕ ಸೇನೆ ತಯಾರಾಗಿರಬೇಕು. ಈ ಸತ್ಯ ಅಭ್ಯಾಸದ ಮುಂದೆ ಅನೇಕ ಅಯತಾರ್ಥ ಅಭ್ಯಾಸಗಳು ಸ್ವಯಂ ಅಯತಾರ್ಥ ಎಂದು ಪ್ರತ್ಯಕ್ಷವಾಗುತ್ತವೆ. ಸಂಕಲ್ಪದಿಂದಲೂ ಕೂಡ ಪಾಪ ಬರುತ್ತದೆ. ಸಂಕಲ್ಪದ ಪಾಪಕ್ಕೂ ಪ್ರತ್ಯಕ್ಷ ಫಲ ಇರುತ್ತದೆ. ಸ್ವಯಂನಲ್ಲಿ ಯಾವುದಾದರೂ ಬಲಹೀನತೆ ಅಥವಾ ವಿಕಾರವಿದ್ದರೂ ಪಾಪದ ಖಾತೆ ಜಮಾ ಆಗುತ್ತದೆ ಮತ್ತು ಅನ್ಯ ಆತ್ಮರ ಪ್ರತಿ ಸಂಕಲ್ಪದಲ್ಲಾದರೂ ವಿಕಾರವಿದ್ದರೂ, ವೃತ್ತಿಯಿದ್ದರೂ, ವ್ಯರ್ಥವಾಗಿ ಮಾತನಾಡಿದರೂ, ಶುಭ ಭಾವನೆಗೆ ಬದಲು ಯಾವ ಭಾವನೆ ಇದ್ದರೂ ಪಾಪದ ಖಾತೆ ಎಂದು ಲೆಕ್ಕಿಸಲ್ಪಡುತ್ತದೆ. ಶುಭ ಭಾವನೆ ಮಾತ್ರವೇ ಪುಣ್ಯದ ಖಾತೆಯನ್ನು ಬೆಳೆಸುತ್ತದೆ. ತಂದೆಯವರಾದ ನಂತರ ಎಣಿಕೆಯಿಲ್ಲದ ಪ್ರಾಪ್ತಿ ಆದರೆ ಪುಣ್ಯದೊಂದಿಗೆ ಪಾಪಕ್ಕೆ ಕೂಡ 100 ಪಟ್ಟು ಇರುತ್ತದೆ, ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಒಂದು ಕ್ಷಣದಲ್ಲಿ ಧ್ವನಿಯ ಪ್ರಪಂಚಕ್ಕೆ ಅತೀತವಾಗಿ, ಧ್ವನಿಗೆ ಅತೀತವಾದ ಪ್ರಪಂಚದ ನಿವಾಸಿಯಾಗಿ ಸರ್ವಪ್ರಾಪ್ತಿಗಳನ್ನು ಅವಿನಾಶಿ ಸುಖವನ್ನು, ಆಹ್ಲಾದಕರ ಸ್ಥಿತಿಯನ್ನು ಅನುಭವ ಮಾಡಿಕೊಂಡಿದ್ದೇನೆ.

2. ನಾನು ಒಂದು ಕ್ಷಣದಲ್ಲಿ ತಂದೆಯಿಂದ ಲಭಿಸಿರುವ ಸಂಕೇತದಿಂದ ಏಕರಸ ಸ್ಥಿತಿಯಲ್ಲಿ ಸ್ಥಿತವಾಗಿರುವ ಆತ್ಮಿಕ ಸೇನೆ.

3. ವಿಶ್ವಕಲ್ಯಾಣಕಾರಿಯಾದ ನಾನು ನನ್ನ ವೃತ್ತಿ ಅಥವಾ ತರಂಗಗಳಿಂದ ಸಮರ್ಥ ಸ್ವರೂಪವಾಗಿರುವ ವಿಶ್ವಸೇವಾಧಾರಿ.

4. ನಾನು ಮಾಡಿರುವ ಪ್ರತಿಜ್ಞೆ ಮತ್ತು ಪ್ರತ್ಯಕ್ಷ ಕರ್ಮ ಎರಡರಲ್ಲಿ ಸಮಾನತೆ ಇರುವ ಪುಣ್ಯಾತ್ಮ.

5. ನಾನು ಶುಭ ಚಿಂತಕನಾಗಿ ಸರ್ವಾತ್ಮರ ಮಾತುಗಳನ್ನು, ಭಾವನೆಗಳನ್ನು ಪರಿವರ್ತನೆ ಮಾಡಿ ಭಾವ ಮತ್ತು ಭಾವನೆಯನ್ನು ಸದಾ ಶ್ರೇಷ್ಠವಾಗಿಸಿಕೊಂಡಿರುವ ಪುಣ್ಯಾತ್ಮ.

6. ನಾನು ಸ್ವಪರಿವರ್ತನೆಯಲ್ಲಿ 'ಮೊದಲು ನಾನು' ಎಂದು ಯೋಚಿಸಿ ಮರುಜೀವಾ ಆಗಿ ಇತರರ ಪರಿವರ್ತನೆಯನ್ನು ಮಾಡಿ ಸತ್ಯವಾದ ಜೀವದಾನ ಮಾಡಿದ್ದೇನೆ.

7. ನಾನು ಒಬ್ಬ ತಂದೆಯ ಹೊರತು ಬೇರೆ ಯಾರೂ ಇಲ್ಲ ಎನ್ನುವುದರಿಂದ ಹೆಸರಿಗೆ ಸತ್ತುಹೋಗಿ ಎಲ್ಲವನ್ನು ಪಡೆದಿದ್ದೇನೆ.

8. ನಾನು ಸದಾ ತಂದೆಯನ್ನು ಜೊತೆಗಾರನನ್ನಾಗಿ ಮಾಡಿಕೊಂಡು ಕಷ್ಟವನ್ನು ಸುಲಭ ಮಾಡಿ ಕೊಂಡಿದ್ದೇನೆ.